ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಜನೇವರಿ 2025








**January 2025**

### "ವಿಕಲಚೇತನ ಗುಂಪುಗಳ ಅಧ್ಯಕ್ಷ ಕಾರ್ಯದರ್ಶಿಗಳಿಗೆ ಒಂದು ದಿನದ ತಾಲೂಕ ಒಕ್ಕೂಟ ಸಭೆ"

ಡಿಸೆಂಬರ್ 14 2024 ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜ್ಜಿ ಫೌಂಡೇಶನ್ ಇವರ ಸಂಯುಕ್ತ ಶ್ರೇಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ವಿಕಲಚೇತನ ಗುಂಪುಗಳ ಅಧ್ಯಕ್ಷ ಕಾರ್ಯದರ್ಶಿಗಳಿಗೆ ಒಂದು ದಿನದ ತಾಲೂಕ ಒಕ್ಕೂಟ ಸಭೆ ಕರೆಯಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿರುವ ಶ್ರೀ ಸಂತೋಷ್ ಎ.ಪಿ.ಡಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ನಮ್ಮ ಹಕ್ಕುಗಳಿಗೆ ನಾವು ಯಾವ ರೀತಿ ಹೋರಾಡಬೇಕು ಮತ್ತು ಅದನ್ನು ಹೇಗೆ ಪಡೆದುಕೊಳ್ಳಬಹುದು ಎಂದು ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು ಉದಾಹರಣೆಗೆ, ಯು.ಡಿ.ಐ.ಡಿ ಕಾರ್ಡ್. ಪೆನ್ಷನ್. 5% ಅನುದಾನ. ವಿಕಲಾಂಗರಿಗೆ ಮನೆ ವ್ಯವಸ್ಥೆ, ಉಚಿತ ಮಾತ್ರೆ, ಬಸ್‌ಪಾಸ್. ಮೂರು ಚಕ್ರ ವಾಹನ ಇತ್ಯಾದಿಗಳ ಕುರಿತು ಮಾಹಿತಿಯನ್ನು ನೀಡಿದರು. ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಒಂದನೆಯ ಫಾದರ್ ವಿಕ್ಟರ್ ವಾಸ್ ಅವರು ಮಾತನಾಡುತ್ತಾ, ನಮ್ಮ ಸಂಸ್ಥೆಯು ಸದಾ ನಿಮ್ಮ ಜೊತೆಗೆ ಬೆನ್ನೆಲುಬಾಗಿ ನಿಮಗೆ ಮಾರ್ಗದರ್ಶನವನ್ನು ನೀಡುತ್ತಾ ನಿಮ್ಮನ್ನು ಪ್ರೋತ್ಸಾಹ ನೀಡಲು ಸದಾ ಸಿದ್ಧವಿದೆ ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಅವರನ್ನು ಸಮುದಾಯ ಆಧಾರಿತವಾಗಿ ಪುನರ್ವಸತಿಗೊಳಿಸುವ ಕಾರ್ಯಮಾಡುವದು ನಮ್ಮ ಆರ್ಬಿಟ್ ಸಂಸ್ಥೆ ಮಾಡುತ್ತಿರುವುದು ತುಂಬಾ ಶ್ಲಾಘನೀಯವಾದದ್ದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನಸಿಕ ಕಾಯಿಲೆಗೆ ಮಾಟಮಂತ್ರ ಎಂದು ಸಮುದಾಯದ ಜನರು ಭಾವಿಸುತ್ತಾರೆ, ಆದರೆ ದಿ ಒಂದು ಮೇದುಳಿನ ಕಾಯಿಲೆಯಾಗಿದೆ. ಆದ್ದರಿಂದ ಸೂಕ್ತ ಸಮಯದಲ್ಲಿ ಮನೋವೈದ್ಯಕೀಯ ಚಿಕಿತ್ಸೆಯ ಮೂಲಕ ಮಾನಸಿಕ ಕಾಯಿಲೆಯನ್ನು ನಿವಾರಣೆ ಮಾಡಬಹುದು ಎಂದರು. ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು, ನವ ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು, ಹಾಗೂ ಮಾನಸಿಕ ಅಸ್ವಸ್ಥರು, ಪೋಷಕರು ಸೇರಿ ಒಟ್ಟು 80 ಜನರು ಭಾಗವಹಿಸಿದರು.



**ಪೂಜ್ಯ ರಾಬರ್ಟ್ ಮಿರಾಂಡಾ**
ಗುಲಬರ್ಗಾ ಧರ್ಮಾಧ್ಯಕ್ಷರು

**ವಂ. ಫಾ॥ ವಿಕ್ಟರ್ ವಾಸ್**
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ









orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# "ನವಜೀವನ (ಎ.ಪಿ.ಎಫ್) ಕಾರ್ಯಕ್ರಮ"

## "ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ಮನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ದಿನಾಂಕ್ 05/12/2024 ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ ಗ್ರಾಮದ CHCಯಲ್ಲಿ ಒಟ್ಟು 28 ಜನರಿಗೆ ಅಜೀಮ್ ಪ್ರೇಮಜಿ ಇವರ ಸಂಯುಕ್ತ ಆಶ್ರಯದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿರವರು ಮನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮವನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಲಕ್ಷ್ಮಿ PHCO, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು. ಮಾನಸಿಕ ಕಾಯಿಲೆಯ ಲಕ್ಷಣಗಳು ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯ ಲಕ್ಷಣಗಳು ಕಾರಣ ಇಲ್ಲದೆ ಅಳೋದು ಕಾರಣ ಇಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಬಯ್ಯೋದು, ಮನೆಯಲ್ಲಿ ಏಕಾಂಗಿ ಆಗಿರೋದು ಹೀಗೆ ಅವರ ಲಕ್ಷಣಗಳು ಇರುತ್ತವೆ. ನಿಮ್ಮಲ್ಲಿ ಇಂತಹ ವೆಕ್ತಿಗಳನ್ನು ಕಂಡುಬಂದಲ್ಲಿ, ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ. ಅವರನ್ನು ವೈದ್ಯರ ತಪಾಸಣೆಗೆ ತರಲು ಹೇಳಲಾಯಿತು. ತಪಾಸಣೆಯ ಉಚಿತವಾಗಿ ಮಾಡಿ ಅವರಿಗೆ ಉಚಿತ ಔಷಧಿಯನ್ನು ಕೊಡುತ್ತಾರೆ. ಹೆಚ್ಚಿನ ಮಾಹಿತಿಗಾಗಿ 9036664271 ಈ ನಂಬರಿಗೆ ಕರೆಮಾಡಿ ಮಾಹಿತಿ ತಿಳಿದುಕೊಳ್ಳಬೇಕೆಂದು ತಿಳಿಸಿದರು. ಬುಧವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾ 1:00 ಗಂಟೆಯ ವರೆಗೆ ತಪಾಸಣೆ ಮಾಡುತ್ತಾರೆ ಎಂದು ತಿಳಿಸಲಾಯಿತು. ವರದಿಗಾರರು:- ಮಹಾದೇವಿ

## "ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಪ್ರಾಮುಖ್ಯತೆ ನೀಡಿ"



ದಿನಾಂಕ 20/12/2024/ ರಂದು ಕೇಡೊಳ ಗ್ರಾಮದಲ್ಲಿರುವ ಫಲಾನುಭವಿಗಳ ಕುಟುಂಬಗಳಿಗೆ ಭೇಟಿ ನೀಡಿದಾಗ, ಅಗತ್ಯಇರುವ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಪ್ರಾಮುಖ್ಯತೆ ನೀಡಿ ಒಳಪಡಿಸಲಾಯಿತು. ತೀವ್ರವಾಗಿಇರುವ ಫಲಾನುಭವಿಗಳ ಒಂದುಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆಯ ಬಗ್ಗೆ ಮಾಹಿತಿಯನ್ನು ನೀಡಿದಾಗಅದರಖಿನ್ನತೆಯ ಲಕ್ಷಣಗಳು ಅರ್ಥ ಮಾಹಿತಿಯನ್ನು ನೀಡಿದಾಗ ಆಪ್ತ ಸಮಾಲೋಚನೆಯಿಂದ ಸಾಧ್ಯವೇಎಂದು ಪ್ರಶ್ನೆ ಮೂಡಿ ಬಂದಿತ್ತು ತೀವ್ರವಾಗಿಇರುವ ಫಲಾನುಭವಿಗಳ ಕುಟುಂಬದಲ್ಲಿ ಆಪ್ತ ಸಮಾಲೋಚನೆ ಎಂಬ ವಿಷಯವನ್ನುಗೊತ್ತಿಲ್ಲದ ಪರಿಸ್ಥಿತಿ ಇತ್ತು ಹೇಗೆ ಆಪ್ತ ಸಮಾಲೋಚನೆಗೆ ಒಳಪಡುವುದು ಎಂದು ಫಲಾನುಭವಿಗಳಿಗೆ ಕಷ್ಟಕರವಾಗುತ್ತಿತ್ತು. ಸಹಾಯಕ ಆಪ್ತ ಸಮಾಲೋಚಕರು ಶ್ರೀ ರವಿಕುಮಾರ್‌ರವರು ಸಂಪೂರ್ಣ ಮಾಹಿತಿಯನ್ನು ನೀಡಿದಾಗ, ಮಾನಸಿಕ ಅಸ್ವಸ್ಥರಲಿ ಕಂಡುಬರುವ ವರ್ತನೆಗಳು ಖಿನ್ನತೆಯಲ್ಲಿಕುಗ್ಗಿದ ಫಲಾನುಭವಿಗಳಿಗೆ ಉತ್ತಮ ಪ್ರೋತ್ಸಾಹ, ಧೈರ್ಯ, ಬಲ, ಆತ್ಮವಿಶ್ವಾಸ, ಪ್ರೇರಣೆ, ಮಾರ್ಗಸೂಚಿಗಳು ಆದರ್ಶದಜೀವನದ ಕೌಶಲ್ಯಗಳ ಅಭಿವೃದ್ಧಿಯ ಪಥದಲ್ಲಿಕೊಡಗಲುಆಪ್ತಸಮಲೋಚನೆಯಿಂದ ಸಾಧ್ಯವಾಗುತ್ತಿದೆಎಂದು ಫಲಾನುಭವಿಗಳು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ, ನನ್ನಜೀವನದ ಸಾರಾಂಶವನ್ನುಯಾವುದೇ ಭಯವಿಲ್ಲದೆ ವೈದ್ಯರ ಸಂಪರ್ಕಕ್ಕೆ ಹೋದಾಗ ಮಾತ್ರೆಗಳು ಸಿಗದೇ ಇರುವಾಗ ಬಹಳ ಕೊಂದರೆಯಾಗುತ್ತಿತ್ತು. ಆದರೆಇಂದು ಆಪ್ತ ಸಮಾಲೋಚನೆಯಿಂದ ಹೇಳಿಕೊಳ್ಳಲು ಸಂಪೂರ್ಣ ಮಾಹಿತಿ ನೀಡಲು ಸಾಧ್ಯವಾಗುತ್ತಿದೆ.ಈ ಮುಂಚೆ ಅನೇಕ ಮಾಟ ಮಂತ್ರಗಳಲ್ಲಿ ಹೆಚ್ಚು ಆದಿತ್ಯ ನೀಡುತ್ತಿದ್ದೆವು ಸದ್ಯದಲ್ಲಿ ನಿರಂತರಚಿಕಿತ್ಸೆಯಿಂದ ಹಾಗೂ ವೈದ್ಯರ ಸಲಹೆ ಸೂಚನೆಗಳು ಹಾಗೂ ಆಪ್ತ ಸಮಾಲೋಚನೆಯಲ್ಲಿ ವ್ಯಕ್ತಪಡಿಸಿರುವ ವಿಷಯಗಳು ನೀಡಿದಾಗಅದರಿಂದ ನಮ್ಮ ಮನಸ್ಸಿಗೆ ಮತ್ತು ನೆಮ್ಮದಿಗೆ ಸಮಾಧಾನ, ಶಾಂತಿ, ನೆಮ್ಮದಿ, ಆನಿಸ್ತಿದೆ. ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ, ಸಿಬ್ಬಂದಿ ವರ್ಗದವರಿಗೂ, ಋಣಿಯಾಭಾರಿಯಾಗಿದ್ದೇನೆ. ಸಂಸ್ಥೆ ನೀಡಿರುವ ಸಹಾಯಕ್ಕೆಎಂದು ಮರೆಯುವುದಿಲ್ಲ ಆತ್ಮವಿಶ್ವಾಸದಿಂದ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಎಂದು ಫಲಾನುಭವಿಗಳು ವ್ಯಕ್ತಪಡಿಸಿದರು. ವರದಿಗಾರರು:- ರವಿ ಜಿ

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಡಿಸೆಂಬರ್ 5ರಂದು ಚಿಟುಗುಪ್ಪ ತಾಲೂಕಿನ ನಿರ್ಣಾ ಗ್ರಾಮದ ಜ್ಞಾನ ದೀಪ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹೊಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ರವರು ಮಕ್ಕಳಿಗೆ ಮಾಹಿತಿ ನೀಡುತ್ತಾ, ಆರೋಗ್ಯ ಎಂದರೇನು ಮಾನಸಿಕ ಆರೋಗ್ಯ ಎಂದರೇನು ಮತ್ತು ಮಾನಸಿಕ ಕಾಯಿಲೆ ಎಂದರೇನು ಅದು ಹೇಗೆ ಬರುತ್ತದೆ ಮತ್ತು ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದೆ ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿದುಕೊಂಡು ಸೂಕ್ತ ವೈದ್ಯರ ಸಲಹೆ ಪಡೆದು ಇತರ ರೋಗಗಳಂತೆ ಗುಣಪಡಿಸುವುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 55 ಮಕ್ಕಳು ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ವರದಿಗಾರರು:- ಅರುಣಕುಮರ ಎಸ್

## "ವಿಕಲಚೇತನರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಮತ್ತು ಹಕ್ಕುಗಳು"



ದಿನಾಂಕ 10/12/2024 ರಂದು ನಿಂಬೂರ್ ಗ್ರಾಮದಲಿ ಫಲಾನುಭವಿಯಾಗಿರುವ ಕುಟುಂಬಗಳಿಗೆ ಭೇಟಿ ನೀಡಿ, ಈ ಸಂದರ್ಭದಲ್ಲಿ ಅಂಬೇಡ್ಕರ್ ವಿಶೇಷ ವಿಕಲಚೇತನರ ಸಂಘದ ಸಭೆ ಹಮ್ಮಿಕೊಳ್ಳಲಾಯಿತು,ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ, ಶ್ರೀ ಡೇವಿಡ್ ಅವರು ವಿಕಲಚೇತನರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಮತ್ತು ತಮ್ಮ ಹಕ್ಕುಗಳನ್ನು ಹೇಗೆ ಪಡೆದುಕೊಳ್ಳಬೇಕು, ಅಧಿಕಾರಿಗಳೊಂದಿಗೆ ಯಾವ ರೀತಿ ವ್ಯವಹರಿಸಬೇಕು, ಎಂಬುದರ ಕುರಿತು ಸಂಘದ ಸದಸ್ಯರಿಗೆ ಮಾಹಿತಿಯನ್ನು ಕೊಡಲಾಯಿತು. ಸೇರಿದ ಸಂಘದ ಸದಸ್ಯರು ಮಾಹಿತಿಯನ್ನು ಪಡೆದುಕೊಂಡು, ಈ ಸಭೆಯಲ್ಲಿ 06 ಜನರು ಭಗವಹಿಸಿದರು. ವರದಿಗಾರರು:- ಡೇವಿಡ್

## "ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ"



ಡಿಸೆಂಬರ್ 2ರಂದು ಹುಮ್ನಾಬಾದ್ ಪಟ್ಟಣದ ಶಾಂತ್ರಿ ಕಾಲೋನಿಯಲ್ಲಿರುವ ಸ್ಮಾರ್ಟ್ ಕಿಡ್ಸ್ ಶಾಲೆಯಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಅರ್ಬಟ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಕಂಠಿ ಅವರು ಶಾಲಾ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಮಾಹಿತಿ ನೀಡಿದರು. ಇಂದಿನ ಅನೇಕ ಯುವಕರು ತಂಬಾಕು ಗುಟ್ಕ ಬಿಡಿ ಸಿಗರೇಟ್ ಎಂಬ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ನಾವು ಸರ್ವೇ ಸಾಮಾನ್ಯವಾಗಿ ನೋಡುತ್ತಿದ್ದೇವೆ. ಯುವಕರು ನಶೆಯ ಪದಾರ್ಥಗಳ ದುಷ್ಪರಿಣಾಮದ ಕುರಿತು ಅರಿತುಕೊಳ್ಳುವ ಮುಖಾಂತರ ಕ್ಯಾನ್ಸರ್ ಎಂಬ ಮಹಾಮಾರಿಯಿಂದ ದೂರವಿರಬಹುದು. ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಕ್ಯಾನ್ಸರ್ ರೋಗ ಬಂದರೆ ಇಡೀ ಕುಟುಂಬವೇ ಆರ್ಥಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಜರ್ಜರಿತವಾಗುತ್ತದೆ, ಅಕ್ಷರಶ ಕುಟುಂಬವು ಅಧಪತನಕ್ಕೆ ಇಳಿಯುತ್ತದೆ. ಆದ್ದರಿಂದ ದೇಶದ ಭವಿಷ್ಯ ರೂಪಿಸುವ ಇಂದಿನ ವಿದ್ಯಾರ್ಥಿಗಳು ದುಶ್ಚಟದ ಕುರಿತು ಅರಿತುಕೊಂಡು ನಶೆಯ ಪದಾರ್ಥಗಳಿಂದ ದೂರವಿರಬೇಕು. ಈ ನಿಟ್ಟಿನಲ್ಲಿ ಅರ್ಬಿಟ್ ಸಂಸ್ಥೆಯು ಬೀದರ್ ಜಿಲ್ಲೆಯಾದ್ಯಂತ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಮೂಡಿಸುವ ಸಮಾಜ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ತಮ್ಮ ಸಮುದಾಯದಲ್ಲಿ ಯಾರಿಗಾದರೂ ಕ್ಯಾನ್ಸರ್ ರೋಗದ ಲಕ್ಷಣಗಳು ಕಂಡು ಬಂದಲ್ಲಿ ಅರ್ಬಿಟ್ಸ್ ಸಂಸ್ಥೆಯ ಕಾರ್ಯಕರ್ತರನ್ನು ಸಂಪರ್ಕಿಸುವ ಮೂಲಕ ಹೆಚ್ಚಿನ ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂಬುದಾಗಿ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸ್ಮಾರ್ಟ್ ಕಿಡ್ಸ್ ಶಾಲೆಯ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಸೇರಿ 82 ಜನ ಭಾಗವಹಿಸಿದರು. ವರದಿಗಾರರು:– ನೀಲಕಂಠ

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



ದಿನಾಂಕ 03/12/2024 ರಂದು ಹುಮನಾಬಾದ್ ತಾಲೂಕಿನ ಘೋಡವಾಡಿ ಗ್ರಾಮದ ಶ್ರೀ ರಾಮ ಕೃಷ್ಣ ಪ್ರೌಢ ಶಾಲೆಯಲ್ಲಿ ಅರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ, ಮಾನಸಿಕ ಎಂದರೇನು.ಮಾನಸಿಕ ಕಾಯಿಲೆ ಎಂದರೇನು, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡುತ್ತಾ, ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇತರ ಕಾಯಿಲೆಗಳಂತೆ ಇದು ಕೂಡ ಒಂದು ಮೆದುಳಿನ ಕಾಯಿಲೆಯಾಗಿದೆ ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ರಾಮ ಕೃಷ್ಣ ಪ್ರೌಢ ಶಾಲೆಯ ಶಿಕ್ಷಕರು ಮತ್ತು ಮಕ್ಕಳು ಒಟ್ಟು 86 ಜನ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು. ವರದಿಗಾರರು:– ಪೂಜಾ

# "ಮಹಿಳ ಸಬಲೀಕರಣ ಕಾರ್ಯಕ್ರಮಗಳು"

## "ಮಹಾಸಂಗದ ಪದಾಧಿಕಾರಿಗಳಿಗೆ ಸ್ಥಳೀಯ ಸಂಪನ್ಮೂಲ ಕ್ರೂಡಿಕರಣ ತರಬೇತಿ"



ದಿನಾಂಕ 14.12.2024 ರಂದು ಬಾಲ್ಕಿ ತಾಲೂಕಿನ ಹುಣಜಿ ಗ್ರಾಮದ ಆತ್ಮಜ್ಯೋತಿ ಮಹಾಸಂಗದ ಪದಾಧಿಕಾರಿಗಳಿಗೆ ಸ್ಥಳೀಯ ಸಂಪನ್ಮೂಲ ಕ್ರೂಡಿಕರಣ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಅರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣದ ಕಾರ್ಯಕರ್ತರಾದ ಶ್ರೀಮತಿ ಪ್ರಭಾವತಿಅವರು ಗುಂಪಿನ ಸದಸ್ಯರಿಗೆ ಸ್ಥಳೀಯ ಸಂಪನ್ಮೂಲ ಕ್ರೂಡಿಕರಣ ಎಂದರೆ ಸ್ಥಳೀಯವಾಗಿ ಬ್ಯಾಹವಾಗಿ ಅಥವಾ ಅಂತರಿಕವಾಗಿ ಕ್ರೂಡಿಕರಿಸುವುದು ಇದರಲ್ಲಿ ಎರಡು ವಿಧಗಳನ್ನು ಹೊಂದಿದೆ. ಮೊದಲನೇದು ಮಾನವ ಸಂಪನ್ಮೂಲ ಕ್ರೂಢೀಕರಣ ಎರಡನೆಯದು ನೈಸರ್ಗಿಕ ಸಂಪನ್ಮೂಲ ಕ್ರೂಢೀಕರಣ. ಮಾನವ ಸಂಪನ್ಮೂಲ ಕ್ರೂಢೀಕರಣ ಎಂದರೆ ಮಾನವನಿಗೆ ಬೇಕಾಗಿರುವ ಮೂಲ ಸೌಕರ್ಯಗಳು ಎಂದರೆ ಆಹಾರ, ವಸತಿ, ಕೋಲ್ಗೇಟ್, ಬಟ್ಟೆ, ತರಕಾರಿ ವಸತಿಸ್ಥಳ ಇತ್ಯಾದಿ. ಈ ರೀತಿಯಾಗಿ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ. ಹಾಗೆ ನೈಸರ್ಗಿಕ ಸಂಪನ್ಮೂಲ ಎಂದರೆ ನೀರು, ಗಾಳಿ, ಬೆಳಕು, ಬಿಸಿಲು ಹೀಗೆ ಹಲವಾರು ರೀತಿಯಿಂದ ಸಂಪನ್ಮೂಲ ಕ್ರೂಢೀಕರಣವನ್ನು ಮಾಡಬಹುದು ಎಂದು ಮಹಾಸಂಗದ ಪದಾಧಿಕಾರಿಗಳಿಗೆ ತಿಳಿಸಿಕೊಡಲಾಯಿತು. ವರದಿಗಾರರು:– ಪ್ರಭಾವತಿ

## "ಸ್ವ-ಉದ್ದಿಮೆಯಲ್ಲಿ ತೊಡಗಿದ ಮಹಿಳೆ"



**ವ್ಯಕ್ತಿಯ ಪರಿಚಯ:** ಶ್ರೀಮತಿ ಶ್ರೀದೇವಿ ಗಂಡ ಬುದ್ಧಾನಂದ್ ಸಿಂಧೆ ಗ್ರಾಮ ಭಾಲ್ಕಿ ಸಿದ್ಧಾರ್ಥನಗರ. ಶ್ರೀಮತಿ ಶ್ರೀದೇವಿ ಗಂಡ ಬುದ್ಧನಂಧ ಸಿಂದೆ ಸಿದ್ಧಾರ್ಥ ನಗರದಲ್ಲಿ ನಿವಾಸಿಯಾಗಿದ್ದು ಇವರಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳಿದ್ದು ಮಕ್ಕಳಿಗೆ ಸಾಕಿಕೊಂಡು ಶಾಲೆಗೆ ಕಳುಹಿಸುತ್ತಿದ್ದರು ಅವರು ಪಿಯುಸಿ ಸೆಕೆಂಡ್ ಇಯರ್‌ತನಕ ವಿದ್ಯಾಭ್ಯಾಸ ಮಾಡಿಕೊಂಡಿದ್ದರು ಆದರೆ ಗಂಡ ಹೊರಗಡೆ ಕೆಲಸಕ್ಕೆ ಕಳುಹಿಸುವುದು ತುಂಬಾ ಕಷ್ಟವಾಗಿತ್ತು ಅವರು ಸಿದ್ಧಾರ್ಥನದದಲ್ಲಿ ಹತ್ತು ಸದಸ್ಯರನ್ನು ಸೇರಿಸಿ ಅರ್ಬಿಟ್ ಸಹಾಯದಿಂದ ಅವರು ಸಂಘವನ್ನು ರಚಿಸಿ ಅಧ್ಯಕ್ಷ ಸ್ಥಾನವನ್ನು ತೆಗೆದುಕೊಂಡು ಎಲ್ಲರ ಸೇರಿಕೊಂಡು ತಿಂಗಳಿಗೊಮ್ಮೆ ಸಂಘವನ್ನು ಮಾಡುತ್ತಿದ್ದರು. ಮೊದಲನೆಯ ಬಾರಿಗೆ ಬ್ಯಾಂಕ್ ಸಾಲ ತೆಗೆದುಕೊಂಡು ಅವರ ಸ್ಥಳದಲ್ಲಿ ಒಂದು ತಗಡ ಶಡ್ಡನ್ನು ಹಾಕಿದ್ದರು ಎರಡನೇ ಬಾರಿಗೆ ಬ್ಯಾಂಕ್ ಸಾಲ ತೆಗೆದುಕೊಂಡು ಒಂದು ಹಿಟ್ಟಿನ ಗಿರಣಿಯನ್ನು ತೆಗೆದುಕೊಂಡರು. ಹಿಟ್ಟಿನ ಗಿರಣಿಯಿಂದ ಲಾಭವನ್ನು ತೆಗೆದುಕೊಂಡು ಮತ್ತು ಮೂರನೆಯ ಬಾರಿಗೆ ಬ್ಯಾಂಕ್ ಸಾಲದ ಜೊತೆಗೆ ಹಿಟ್ಟಿನ ಗಿರಣಿಯ ಲಾಭದ ಹಣವನ್ನು ಸೇರಿಸಿ ಒಂದು ಖಾರ ಕುಟ್ಟುವ ಗಿರಣಿಯನ್ನು ತೆಗೆದುಕೊಂಡರು ಮನೆ ಕೆಲಸ ಮುಗಿಸಿ ಹಿಟ್ಟಿನಗಿರಣಿ ಮತ್ತು ಖಾರಾವನ್ನು ಬೀಸುತ್ತಿದ್ದಾರೆ ಅವರಿಗೆ ದಿನಕ್ಕೆ 800 ರಿಂದ ಒಂದು ಸಾವಿರವರೆಗೆ ಲಾಭ ಆಗುತ್ತಾ ಇದೆ ಎಂದು ಹೇಳಿದ್ದರು. ಅವರ ಅನಿಸಿಕೆ ಅರ್ಬಿಟ್ ಸಂಸ್ಥೆಯಲ್ಲಿದ್ದ ಸಂಘದಲ್ಲಿ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದುಕೊಂಡು ಹಲವಾರು ಕಾರ್ಯಕ್ರಮಗಳನ್ನು ಮಾಡಿಕೊಂಡು ಸುಗಮವಾಗಿ ಜೀವನವನ್ನು ಸಾಗುತ್ತಿದ್ದೆ ನನ್ನ ಪರವಾಗಿ ನನ್ನಕುಟುಂಬದ ಪರವಾಗಿ ಧನ್ಯವಾದಗಳು. ವರದಿಗಾರರು:– ಸುಜಾತಾ

## "ಸರಕಾರಿ ಸೌಲತ್ತುಗಳು ಪಡೆದುಕೊಂಡ ಮಹಿಳೆ"



ಶ್ರೀಮತಿ ಪ್ರಭಾವತಿ ಗಂಡ ಕಲ್ಯಾಣ ಇವರು ಮನ್ನಾಯಕ್ಕಳ್ಳಿ ಗ್ರಾಮದ ನಿವಾಸಿಯಾಗಿದ್ದು ಸುಮಾರು 15 ವರ್ಷದಿಂದ ಸದಸ್ಯರಾಗಿ ಕಿತ್ತೂರು ಚೆನ್ನಮ್ಮ ಮಹಾಸಂಗದಲ್ಲಿ ಅಧ್ಯಕ್ಷರಾಗಿ ಬೆಳದಿಂಗಳು ಜಿಲ್ಲಾ ಒಕ್ಕೂಟದಲ್ಲಿ ಕಜಾನ್ಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಇವರ ಸಂಘಕ್ಕೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾರವರು ಹಲವರು ತರಬೇತಿ ಮಾಹಿತಿಗಳನ್ನು ನೀಡಿದ ಪರಿಣಾಮವಾಗಿ ಇವರು ಲೇಬರ್ ಕಾರ್ಡ್ ಆಶ್ಮನ್ ಕಾರ್ಡ್ ಮಾಡಿಸಿಕೊಂಡಿದ್ದಾರೆ ಇವರಿಗೆ 5000 ಹಾಗೂ ಮಗಳ ಶಿಕ್ಷಣಕ್ಕಾಗಿ 40,000 ಸಹಾಯಧನ ಸಿಕ್ಕಿದೆ ಹಾಗೂ ಸರಕಾರದಿಂದ ಪ್ರಧಾನಮಂತ್ರಿ ಅವಾಜ್ ಯೋಜನೆ ಅಡಿಯಲ್ಲಿ ಮನೆ ದೊರಕಿದೆ ಇದರಿಂದ ನಮಗೆ ಬಹಳ ಅನುಕೂಲಕರವಾಗಿದೆ ಈ ಸೌಲಭ್ಯಗಳು ಪಡೆದುಕೊಳ್ಳಲು ಸಹಾಯ ಮಾಡಿದಂತಹ ಅರ್ಬಿಟ್ ಸಂಸ್ಥೆಗೆ ವಂದನೆಗಳನ್ನು ಸಲ್ಲಿಸುತ್ತೇನೆ.



ಪದ್ಮಾವತಿ ಗಂಡ ವಿಠಲ ಇವರು ಸೀತಾಳಗೇರಾ ಗ್ರಾಮದ ನಿವಾಸಿಯಾಗಿದ್ದು ಸುಮಾರು 25 ವರ್ಷಗಳಿಂದ ಜನನಿ ಸಂಘದಲ್ಲಿ ಅಧ್ಯಕ್ಷರಾಗಿ ಉದಯ ಮಹಾಸಂಗದಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸಂಘಕ್ಕೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾ ರವರು ಹಲವಾರು ತರಬೇತಿ ಮಾಹಿತಿಗಳನ್ನು ನೀಡಿದ ಪರಿಣಾಮವಾಗಿ ಇವರು ಲೇಬರ್ ಕಾರ್ಡ್, ಜಾಬ್ ಕಾರ್ಡ್, ಇ-ಶ್ರಮ ಕಾಡುಗಳು ಮಾಡಿಸಿಕೊಂಡಿದ್ದಾರೆ. ಇವರ ಯಜಮಾನರು ತೀರಿ ಹೋದ ನಂತರ ಅವರ ಮರಣ ಪ್ರಮಾಣ ಪತ್ರ ಮಾಡಿಸಿಕೊಂಡಿದ್ದಾರೆ. ಹಾಗೆ ವಿಧವೆ ವೇತನಕ್ಕಾಗಿ ಮತ್ತು ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ ಪರಿಣಾಮವಾಗಿ ಪ್ರತಿ ತಿಂಗಳು 800 ವಿಧವ ವೇತನ ಹಣ ಬರುತ್ತಿವೆ. ಮತ್ತು 20,000 ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿ ಸಿಕ್ಕಿರುತ್ತದೆ. ಹಾಗೆಯೇ ಅವರ ಯಜಮಾನರು ತೀರಿಕೊಂಡ ಪರಿಣಾಮವಾಗಿ ಕಾರ್ಮಿಕ ಇಲಾಖೆಯಿಂದ 50,000 ಸಹಾಯಧನ ಪಡೆದುಕೊಂಡಿದ್ದಾರೆ. ಮೂರು ಎಕ್ಕರೆ ಭೂಮಿಯನ್ನು ಅವರ ಹೆಸರಿನಲ್ಲಿ ಮಾಡಿಸಿಕೊಂಡಿದ್ದಾರೆ. ಲೇಬರ್ ಕಾಡಿಗೆ 5000 ಸಹಾಯಧನ ಕೂಡ ಪಡೆದುಕೊಂಡಿದ್ದಾರೆ. ಮತ್ತು ಅವರಿಗೆ ಸರಕಾರದಿಂದ ಮನೆ ಸಹ ಮಂಜೂರು ಆಗಿರುತ್ತೆ ಇದರಿಂದ ನನಗೆ ಬಹಳ ಅನುಕೂಲಕರವಾಗಿದೆ ಈ ಸೌಲಭ್ಯಗಳ ಪಡೆದುಕೊಳ್ಳಲು ಸಹಾಯ ಮಾಡಿದಂತಹ ಅರ್ಬಿಟ್ ಸಂಸ್ಥೆಗೆ ಧನ್ಯವಾದಗಳು ಸಲ್ಲಿಸುತ್ತೇನೆ. ವರದಿಗಾರರು:- ಅಮೀತಾ



ಶಾಂತಾಬಾಯಿ ಇವರು ಹಣಮಂತವಾಡಿ ಗ್ರಾಮದ ನಿವಾಸಿಯಾಗಿದ್ದು, ಅಮೃತ ಸಂಘದ ಸದಸ್ಯರು ಆಗಿದ್ದಾರೆ. ಇವರು ಸುಮಾರು 30 ವರ್ಷಗಳಿಂದ ಹತ್ತು ರೂಪಾಯಿಂದ ಸಂಘದಲ್ಲಿ ಉಳಿತಾಯ ಮಾಡುತ್ತ ಪ್ರಸ್ತುತವಾಗಿ ನೂರು ರೂಪಾಯಿ ತಿಂಗಳಿಗೆ ಉಳಿತಾಯ ಮಾಡುತಾ ಇದ್ದಾರೆ. ಅರ್ಬಿಟ್ ಸಂಸ್ಥೆಯಿಂದ ಹಲವಾರು ಯೋಜನೆಯ ಮುಖಾಂತರ ತರಬೇತಿಗಳನ್ನು ಪಡೆದುಕೊಂಡಿದ್ದಾರೆ. ಈ ತರಬೇತಿಯಿಂದಾಗಿ ಸರ್ಕಾರದ ಸೌಲಭ್ಯಗಳಾದ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಪಡೆದುಕೊಂಡುಕೊಂಡಿದ್ದಾರೆ. ಆದರಿಂದ ಶಾಂತಾಬಾಯಿ ಅವರು ಅರ್ಬಿಟ್ ಸಂಸ್ಥೆಗೆ ಧನ್ಯವಾದ ತಿಳಿಸಿದ್ದಾರೆ. ವರದಿಗಾರರು:- ಚಂದ್ರಕಲಾ

## "ಸಂಘದ ಪುಸ್ತಕಗಳು ಬರೆಯುವ ವಿಧಾನಗಳ ಬಗ್ಗೆ ಮಾಹಿತಿ"



ದಿನಾಂಕ 06.12.2024 ರಂದು ಹುಮ್ನಾಬಾದ್ ತಾಲೂಕಿನ ಜಲಸಂಗಿ ಗ್ರಾಮದ ಪರಿಮಳ ಸಂಘದ ಸದಸ್ಯರಿಗೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾರವರು ಸಂಘದ ಪುಸ್ತಕಗಳು ಬರೆಯುವ ವಿಧಾನಗಳನ್ನು ತಿಳಿಸಿಕೊಡಲಾಯಿತು. ಒಟ್ಟು ಸ್ವಸಹಾಯ ಸಂಘದ ಪುಸ್ತಕಗಳು ಈ ಕೆಳಗಿನಂತಿವೆ ಅವುಗಳೆಂದರೆ. ಚರ್ಚಾ ಪುಸ್ತಕ, ನಗದು ಪುಸ್ತಕ, ಸಾಮಾನ್ಯಖಾತೆ, ವೈಯಕ್ತಿಕ ಸಾಲದ ಖಾತೆ, ಉಳಿತಾಯ ಖಾತೆ, ವಯಕ್ತಿಕ ಉಳಿತಾಯ ಪಾಸ್ ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ ಹೀಗೆ ಎಲ್ಲವೂ ಕ್ರಮಬದ್ಧವಾಗಿ ಬರೆದಿಡಬೇಕು ಚರ್ಚಾ ಪುಸ್ತಕದಲ್ಲಿ ಸಭೆಯ ಸಂಖ್ಯೆ ಪ್ರಾರ್ಥನೆ ಸ್ವಾಗತ, ಹಾಜರಿ ಹಾಗೂ ಗೈರು ಹಾಜರಿ ಚರ್ಚಾ ವಿಷಯಗಳು ಮತ್ತು ಹಣಕಾಸಿನ ವ್ಯವಹಾರದ ವಿವರಣೆಯನ್ನು ಎಲ್ಲವೂ ಒಳಗೊಂಡಿರುತ್ತದೆ. ಚರ್ಚೆ ಪುಸ್ತಕ ವೆಂದರೆ ಸಂಘದ ತಾಯಿ ಪುಸ್ತಕವೆಂದು ಕರೆಯುತ್ತಾರೆ. ಆದ್ದರಿಂದ ಶಿಸ್ತುಬದ್ಧವಾಗಿ ಬರೆದಿಡುವ ಕ್ರಮವನ್ನು ಪಾಲಿಸಬೇಕೆಂದು ತಿಳಿಸಲಾಯಿತು. ವರದಿಗಾರರು:- ಸವಿತಾ



## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ವಿಶೇಷ ವಿಕಲಚೇತನರಿಗೆ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ"



ಡಿಸೆಂಬರ್ 09 ರಂದು ಚಿಟ್ಟಗುಪ ತಾಲೂಕಿನ ಬೆಳಕೇರ ಗ್ರಾಮದಲ್ಲಿ ಅರ್ಬಿಟ್ ಸಂಸ್ಥೆ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು 0-8 ವರ್ಷದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಕುಂದು ಕೊರತೆಗಳ ಬಗ್ಗೆ ಮಾಹಿತಿ ಹೇಳಲಾಯಿತು, ನಮ್ಮ ಸಂಸ್ಥೆಯಲ್ಲಿ ನೀಡುವ ಸೌಲಭ್ಯಗಳ ಕುರಿತು ಮಾಹಿತಿ ತಿಳಿಸಿ ಮತ್ತು ವಿಶೇಷ ವಿಕಲಚೇತನರಿಗೆ ಯಾವ ರೀತಿಯಾಗಿ ಅಸೆಸ್ಮೆಂಟ್ ಮತ್ತು ತೆರಪಿ ನೀಡುತ್ತೇವೆ ಎಂಬುದರ ಕುರಿತು ವಿಸ್ತಾರವಾಗಿ ತಿಳಿಸಲಾಯಿತು ಹಾಗೂ ನಿರಮಯ ಕಾಡು ಸೌಲಭ್ಯಗಳ ಕುರಿತು ಮಾಹಿತಿ ನೀಡಿ, ನಿಮ್ಮ ಮಕ್ಕಳು ನಮ್ಮ ಸಂಸ್ಥೆಯಿಂದ ಎಷ್ಟು ಬದಲಾವಣೆಗಳನ್ನು ಕಂಡಿದ್ದಾರೆ ಎಂದು ಪೋಷಕರ ಬಾಯಿಂದಲೇ ಕೇಳಿದಾಗ ಪೋಷಕರು ಅರ್ಬಿಟ್ ಸಂಸ್ಥೆಯಿಂದ ನಮಗೆ ತುಂಬಾ ರೀತಿಯಾದ ಸಹಾಯ ವಾಗಿದೆ ನಮ್ಮ ಮಕ್ಕಳು ಇವಾಗ ಸ್ವಲ್ಪ ಮಟ್ಟಿಗೆ ಸುಧಾರಣೆ ಯಾಗಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿದರು. ಪೋಷಕರ ಸಭೆಯಿಂದ ಇನ್ನೊಂದು ಮಗುವನ್ನು ಪತ್ತೆಹಚ್ಚಲಾಯಿತು. ವರದಿಗಾರರು:- ಮಮತಾ

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಉಪಕೇಂದ್ರ ಆಧಾರಿತ ಚಟುವಟಿಕೆ"



ಡಿಸೆಂಬರ್ 31 ರಂದು ಹುಮ್ನಾಬಾದ್ ತಾಲೂಕಿನ ಕುಮಾರ್ ಚಿಂಚೋಳಿ ಗ್ರಾಮದಲ್ಲಿ ಮೂರು ಅಂಗನವಾಡಿ ಗಳಿಗೆ ಭೇಟಿ ನೀಡಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಉಪಕೇಂದ್ರ ಆಧಾರಿತ ಚಟುವಟಿಕೆ ನೀಡಲಾಯಿತು. ನಾಲ್ಕು ಮಕ್ಕಳಿಗೆ ಮಾತಿನ ದೋಷ ವಿರುವ ಮಕ್ಕಳಿಗೆ ಬಲೂನ್ ಚಟುವಟಿಕೆ, ಕೈಯಲ್ಲಿ ಪೌಡರ್ ಹಾಕಿ ಉದ್ದ ಚಟುವಟಿಕೆ, ಹೀಗೆ ವಿವಿಧ ರೀತಿಯ ಚಟುವಟಿಕೆಗಳನ್ನು ದಿನಾಲು ಮನೆಯಲ್ಲಿ ಮಾಡಲು ಪೋಷಕರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಮಾಹಿತಿಯನ್ನು ನೀಡಲಾಯಿತು. ಕೆಲವು ಮಕ್ಕಳಿಗೆ ಕೈಗಳಲ್ಲಿ ಮತ್ತು ಕಾಲುಗಳಲ್ಲಿ ಶಕ್ತಿ ಇರದೆ ಇರುವುದರಿಂದ ಆ ಮಕ್ಕಳಿಗೆ ಅಂಗನವಾಡಿ ಪೌಷ್ಟಿಕ ಆಹಾರ ಹಾಗೂ ನಮ್ಮ ಸಂಸ್ಥೆಯ ಪೌಷ್ಟಿಕ ಆಹಾರ ಕುರಿತು ಮಾಹಿತಿ ನೀಡಲಾಯಿತು ಕೈಗಳಿಗೆ ಶಕ್ತಿ ಬರುವ ಚಟುವಟಿಕೆ ಹೀಗೆ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡಿಸುತ್ತಾ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳಾದ ಯುಡಿಐಡಿ ಕಾರ್ಡ್, ಆರೋಗ್ಯ ಕಾರ್ಡ್ ಹಾಗೂ ಮಕ್ಕಳಿಗೆ ಆರೋಗ್ಯ ಹಾಗೂ ಆಹಾರದ ಕುರಿತು ಮಾಹಿತಿಯನ್ನು ನೀಡಲಾಯಿತು. ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳಾದ ಯು.ಡಿ.ಐ.ಡಿ ಕಾರ್ಡ್, ಆರೋಗ್ಯ ಕಾರ್ಡ್ ಹಾಗೂ ಮಕ್ಕಳಿಗೆ ಆರೋಗ್ಯ ಹಾಗೂ ಆಹಾರದ ಕುರಿತು ಮಾಹಿತಿಯನ್ನು ನೀಡಲಾಯಿತು. ವರದಿಗಾರರು:- ಸೂರ್ಯಕಾಂತ



## "ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ"



ಡಿಸೆಂಬರ್ 31/2024 ರಂದು ಹುಮ್ನಾಬಾದ್ ತಾಲೂಕಿನ ಮೊಳ್ಕೆರ ಗ್ರಾಮದಲ್ಲಿ ಅರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ ಮಾಡುವುದರ ಮುಖಾಂತರ ಪ್ರತಿ ದಿನ ಎರಡು ಸಲ ಚಟುವಟಿಕೆ ಮಾಡಿಸುವುದನ್ನು ಮಕ್ಕಳ ಪೋಷಕರಿಗೆ ಹೇಳಿಕೊಟ್ಟು ಮಕ್ಕಳಿಗೆ ಬದಲಾವಣೆ ತರುವಂತಹ ಕೆಲಸವನ್ನು ಮಾಡುತ್ತಿದ್ದೇವೆ.ಸಾಕಷ್ಟು ಮಕ್ಕಳು ಬದಲಾವಣೆ ಹೊಂದುತ್ತಿದ್ದಾರೆ. ಅಂಗನವಾಡಿ ಕೇಂದ್ರದಲ್ಲಿ ಕೂಡ ಚಟುವಟಿಕೆ ಮಾಡಿಸುತ್ತಿದ್ದೇವೆ. ಮಕ್ಕಳಿಗೆ ಸರ್ಕಾರದಿಂದ ಯು.ಡಿ.ಐ.ಡಿ ಕಾರ್ಡ್ ಕೂಡ ಮಾಡಿಸಿಕೊಡಲಾಯಿತು. ಇದನ್ನು ಕಂಡು ಮಗುವಿನ ಪೋಷಕರು ಅರ್ಬಿಟ್ ಸಂಸ್ಥೆಯವರು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಮಕ್ಕಳ ಬಾಳಿಗೆ ದಾರಿದೀಪವಾಗಿ ಅರ್ಬಿಟ್ ಸಂಸ್ಥೆ ನಿಂತಿದೆ ಎಂದು ಎಂದು ಕುಟುಂಬದ ಸದಸ್ಯರೆಲ್ಲರೂ ಸಂತೋಷದಿಂದ ಧನ್ಯವಾದಗಳು ತಿಳಿಸಿದ್ದಾರೆ. ವರದಿಗಾರರು:- ಕವಿತಾ



## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವಿನ ಕಾರ್ಯಕ್ರಮ"

ದಿನಾಂಕ 03, 05, 14 ಡಿಸೆಂಬರ್ 2024 ರಂದು ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ (ಕೆ), ಕುರುಬಖೇಳಗಿ, ಚಿಟ್ಟಾ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಮಕ್ಕಳಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆವು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಲಾಯಿತು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಆಗಿದೆ ಯಾರು ಮೂಢ ನಂಬಿಕೆಗೆ ಒಳಗಾಗದೆ ಕೂಡಲೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು. ಹಾಗೂ ಸರಕಾರದಿಂದ ಬರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ನಿಮ್ಮ ಗ್ರಾಮಗಳಲ್ಲಿ ಹಾಗೂ ಓಣಿಯಲ್ಲಿ ಮಾನಸಿಕವಾಗಿ ನರಳುವ ಹಾಗು ಈ ತೊಂದರೆಗೆ ಸಿಲಿಕಿಕೊಂಡಿದವರು ಕಂಡು ಬಂದರೆ ಸೂಕ್ತ ಮಾಹಿತಿಯನ್ನು ಸಹಾಯವಾಣಿ 9036664271 ನಂಬರಗೇ ಕರೆಮಾಡಿ ತಿಳಿಸಿರಿ ಎಂದು ಹೇಳಲಾಯಿತು. ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ DMHP comp ಇರುತ್ತದೆ ನುರಿತ ವೈದ್ಯಾರಿಂದ ತಪಾಸಣೆಗೆ ಒಳಪಡಿಸಿ ಉಚಿತವಾಗಿ ಮಾತ್ರೆಗಳನ್ನು ಪಡೆದುಕೊಳ್ಳಬಹುದು ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 138 ಜನ ಶಾಲೆಯ ಮಕ್ಕಳು ಹಾಗೂ 5 ಸಹ ಶಿಕ್ಷಕರು ಉಪಸ್ಥಿತರಿದ್ದರು.





## "ಕೇರ್‌ಟೇಕರ್ ಗ್ರೂಪ್"



07 ಡಿಸೆಂಬರ್ 2024 ರಂದು ಭಾಲ್ಕಿ ತಾಲೂಕಿನ ಯಣಕೂರ ಗ್ರಾಮದಲಿ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್‌ರವರಿಂದ ಹೊಸ ಕೇರ್‌ಟೇಕರ್ ಗ್ರೂಪ್ ಮಾಡಲಾಯಿತು. ಮಾನಸಿಕ ಅಸ್ವಸ್ಥರನ್ನು ಯಾವತರಹ ನೋಡಿಕೊಳ್ಳುವುದು ಮತ್ತು ಅವರಿಗೆ ದಿನಾ ನಿತ್ಯ ದೈನಂದಿನ ಚಟುವಟಿಕೆಗಳು ಮಾಡಿಸಬೇಕು ಕೆಲಸ ಕಾರ್ಯದಲ್ಲಿ ತೊಡಗಲು ತಿಳಿಸಬೇಕು ಎಂದು ಹೇಳಲಾಯಿತು. ಪ್ರತಿದಿನ ತಪ್ಪದೆ ಮಾತ್ರೆಗಳು ಸೇವನೆ ಮಾಡಲು ಹೇಳಬೇಕು ಸರಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಹಾಗೂ ತಪ್ಪದೆ DMHP comp ಬರಲು ಹೇಳಲಾಯಿತು ಒಟ್ಟು 5 ಜನ ಉಪಸ್ಥಿತರಿದ್ದರು. ವರದಿಗಾರರು:- ಕುಮಾರ

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ"



02 ಡಿಸೆಂಬರ್ 2024 ರಂದು ಬೀದರ್ ತಾಲೂಕಿನ ಜನವಾಡ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ನವಜೀವನ Live Love Laugh Foundation ಸಂಯುಕ್ತಾಶ್ರಯದಲ್ಲಿ ಕಾರ್ಯಕರ್ತರಾದ ಶ್ರೀ ಆನಂದ್‌ರವರು ಮಕ್ಕಳಿಗೆ ಜಾಗೃತಿ ಮೂಡಿಸುತ್ತ ಮಾತನಾಡಿ, ಆರೋಗ್ಯ ಎಂದರೆ. ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 03 ಶಿಕ್ಷಕಿಯರು ಸೇರಿ ಒಟ್ಟು 25 ವಿದ್ಯಾರ್ಥಿಗಳು ಭಾಗವಹಿಸಿದರು.



06 ಡಿಸೆಂಬರ್ 2024 ರಂದು ಬೀದರ್ ತಾಲೂಕಿನ ಅಲ್ಲಾಪೂರ ಗ್ರಾಮದ ಗ್ರಾಮಸ್ಥರಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ Live Love Laugh Foundation ಸಂಯುಕ್ತ ಆಶ್ರಯದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಆನಂದರವರು ಗ್ರಾಮಸ್ಥರಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿ, ಮಾನಸಿಕ ಕಾಯಿಲೆಯೂ ಮೆದುಳಿನ ಕಾಯಿಲೆಯಾಗಿದೆ. ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಾಗುವ ಏರುಪೇರಿನಿಂದ ಭಯ, ಆತಂಕ, ಖಿನ್ನತೆಯಂತಹ ಮಾನಸಿಕ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಇದರ ಬಗ್ಗೆ ನಿರ್ಲಕ್ಷ್ಯ ವಹಿಸದೆ, ಪ್ರತಿ ತಿಂಗಳ 3ನೇ ಬುಧವಾರದಂದು ಪ್ರಾಥಮಿಕ ಆರೋಗ್ಯ ಕೇಂದ್ರ ಚಿಲ್ಲರ್ಗಿಯಲ್ಲಿ ನಡೆಯುವ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಮನೋವೈದ್ಯರ ಬಳಿ ಉಚಿತ ಆಪ್ತ ಸಮಾಲೋಚನೆ ಮತ್ತು ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ 15 ಗ್ರಾಮಸ್ಥರು ಭಾಗವಹಿಸಿದ್ದರು.

ವರದಿಗಾರರು:– ಆನಂದ

## "ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ"



ದಿನಾಂಕ 05, 10 ಡಿಸೆಂಬರ್ 2024 ರಂದು ಬೀದರ್ ತಾಲೂಕಿನ ಸುಲ್ತಾನಪೂರ ಮತ್ತು ಇಮಾಮಬಾದ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅರುಣ್‌ರವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಅದರಲ್ಲಿ ಮಾನಸಿಕ ಅಸ್ವಸ್ಥತೆ ಎಂದರೇನು, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಮತ್ತು ಮಾನಸಿಕ ಅವರನ್ನು ಯಾವರೀತಿ ಪತ್ತೆ ಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಈ ರೋಗ ಒಂದು ಮೆದುಳಿನ ಕಾಯಿಲೆಯಾಗಿದೆ ಇದು ಕೇವಲ ಬಡವರಿಗೆ ಮಾತ್ರವಲ್ಲದೆ ಚಿಕ್ಕವರಿಂದ ದೊಡ್ಡವರವರೆಗೂ ಯಾರಿಗೂ ಬರಬಹುದು. ನಾವು ಈ ಒಂದು ಸಮಸ್ಯೆಯಲ್ಲಿ ಒಳಗಾಗದೆ ನಾವು ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಂಡು ಯಾವುದೇ ಒಂದು ವಿಷಯದಲ್ಲಿ ಮುಳುಗಿ ಹೋಗದಹಾಗೆ ನಮ್ಮ ಆರೋಗ್ಯದ ಕಡೆ ಗಮನ ಕೊಡಬೇಕು. ಎಂದು ಎಚ್ಚರಿಸಿದರು. ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥರನ್ನು ಮೂಢನಂಬಿಕೆಗೆ ಒಳಗಾಗದೆ ಆದಷ್ಟು ಬೇಗ ಚಿಕಿತ್ಸೆಗೆ ಒಳಪಡಿಸಬೇಕೆಂದು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಚಿಲ್ಲರ್ಗಿಯಲ್ಲಿ ಮೂರನೇ ಬುಧವಾರದಂದು ಡಿ.ಎಮ್.ಎಚ್.ಪಿ ಕ್ಯಾಂಪ್ ಇರುತ್ತದೆ. ಪತ್ತೆಹಚ್ಚಿದ ಮಾನಸಿಕರನ್ನು ಚಿಕಿತ್ಸೆಗೆ ಕೋರಿಸುವುದು ಎಂದು ತಿಳಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ 98 ಜನ ಮಕ್ಕಳು 9 ಜನ ಶಿಕ್ಷಕರಿದ್ದು ಒಟ್ಟು 107 ಜನ ಭಾಗವಹಿಸಿದ್ದರು.



ವರದಿಗಾರರು:– ಅರುಣ



ದಿನಾಂಕ 06.12.2024 ರಂದು ಔರಾದ್ ತಾಲೂಕಿನ ಮುಸ್ತಾಪೂರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಕಾರ್ಯಕರ್ತರಾದ ಯೋಹಾನರವರು ಜನರಿಗೆ ಜಾಗೃತಿ ಮೂಡಿಸುತ್ತ ಮಾತನಾಡಿ, ಆರೋಗ್ಯಎಂದರೆ ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಸಿಟ್ಟು, ಕೋಪ, ವಿನಾಕಾರಣ ಅಳುವುದು, ಬೀದಿ ಸುತ್ತುವುದು ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ 9036664271 ಕರೆಮಾಡಿ ಮಾಹಿತಿಯನ್ನು ನೀಡುವ ಮೂಲಕ ಸಹಾಯ ಮಾಡುವುದು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಭಾಗವಹಿಸಿದರು.

ವರದಿಗಾರರು:– ಯೋಹಾನ



ದಿನಾಂಕ 11/12/2024 ರಂದು ಕಮಲನಗರ ತಾಲೂಕಿನ ತಪಶ್ಯಾಳ ಗ್ರಾಮದಲ್ಲಿ ಗ್ರಾಮಸ್ಥರನ್ನು ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಸಂಗೀತಾ ರವರಿಂದ ಕ್ಯಾನ್ಸರ್ ಅರಿವು ಮೂಡಿಸಲಾಯಿತು. ಕ್ಯಾನ್ಸರ್ ಎಂದರೇನು? ಅದರ ವಿಧಗಳು ಹಾಗೂ ಲಕ್ಷಣಗಳು ಹಾಗೂ ಕ್ಯಾನ್ಸರನ್ನು ಹೇಗೆ ತಡೆಯಬಹುದು ಎಂದು ಸಲಹೆಗಳು ತಿಳಿಸಿ ಹೇಳಲಾಯಿತು. ಈ ಕಾರ್ಯಕ್ರಮದಲ್ಲಿ 10 ಜನರೂ ಭಾಗವಾಗಿದ್ದರು.

ವರದಿಗಾರರು:– ಸಂಗೀತಾ

## "ಮಾನಸಿಕ ಆರೋಗ್ಯ ಮತ್ತು ಕ್ಯಾನ್ಸರ್ ಜಾಗೃತಿ



ದಿನಾಂಕ 10/12/2024 ರಂದು ಕಮಲನಗರ ತಾಲೂಕಿನ ಕೊರ್ಯ್ಳಾಳ್ ಗ್ರಾಮದಲ್ಲಿ ಸರ್ಕಾರಿ ಶಾಲೆಯಲ್ಲಿ ನವಜೀವನ ಈ ಕಾರ್ಯಕ್ರಮದ ಕಾರ್ಯಕರ್ತರಾದ ಸಂಗೀತಾರವರಿಂದ ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯ ಲಕ್ಷಣಗಳು ಹಾಗೂ ಕಾರಣಗಳು ತಿಳಿಸಿ, ಈ ರೋಗದ ಬಗ್ಗೆ ಇರುವ ಮೂಢನಂಬಿಕೆಯ ವ್ಯಾಮೋಹಕ್ಕೆ ಒಳಗಾಗಿ ಅನೇಕರು ಹಣ ನಷ್ಟ ಪಡಿಸಿಕೊಂಡಿದ್ದಾರೆ. ಚಿಕಿತ್ಸೆಗೆ ಸ್ಪಂದಿಸಿದ ಅನೇಕ ಜನರು ಗುಣಮುಖರಾಗಿ ತಮ್ಮ ಹಿಂದಿನ ಕೆಲಸದಲ್ಲಿ ತೊಡಗಿದ್ದಾರೆ. ತಾಲೂಕ ಆಸ್ಪತ್ರೆಯಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆ ಸೌಲಭ್ಯವಿದೆ. ಇಂತಹ ವ್ಯಕ್ತಿಗಳು ನಿಮ್ಮ ಹಳ್ಳಿಯಲ್ಲಿ ದೊರಕಿದರೆ, ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆ ಮಾಡಿ ಮಾಹಿತಿ ನೀಡಬಹುದು. ಈ ಕಾರ್ಯಕ್ರಮದಲ್ಲಿ 10 ಜನರು ಶಿಕ್ಷಕರು ಭಾಗವಹಿಸಿದರು.

## "ವಿಶೇಷ ಚೇತನರ ಮತ್ತು ಆರೈಕೆದಾರರ ಸಂಘದ ಸಭೆ"



ದಿನಾಂಕ 11-12-2024 ರಂದು ಔರಾದ್ ತಾಲೂಕಿನ ಮಾಸ್ಕಲ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಯೋಹಾನ್‌ರವರು ವಿಶೇಷ ಚೇತನರ್ ಮತ್ತು ಆರೈಕೆದಾರರ ಸಂಘವನ್ನು ಸಭೆಯನ್ನು ತೆಗೆದುಕೊಳಲಾಯಿತು. ಸಂಘದಲ್ಲಿ ಪಾಲ್ಗೊಂಡ ವಿಶೇಷ ಚೇತನರಿಗೆ ಆರೈಕೆದಾರರ ಸಂಘ ಮಾಡಿಕೊಳ್ಳುವ ಉದ್ದೇಶ, ವಿಶೇಷ ಚೇತನರಿಗೆ ಸರಕಾರ ಯು.ಡಿ.ಐ.ಡಿ, ಗುರುತಿನ ಚೀಟಿ ನೀಡುತ್ತಿದ್ದು, ಇದರನ್ವಯ ಸಾಕಷ್ಟು ಯೋಜನೆಗಳನ್ನು ನೀಡುತ್ತಿದೆ. ಅದರಲ್ಲೂ ಪೋಷಣಾ ಭತ್ಯೆ, ಪಿಂಚಣಿ, ವೈದ್ಯಕೀಯ ಪರಿಹಾರ ನಿಧಿ, ಯಂತ್ರಚಾಲಿತ ದ್ವಿಚಕ್ರ ವಾಹನ, ಶೇ. 5ರ ಅನುದಾನದಲ್ಲಿ ಸೌಲಭ್ಯ ಹಾಗೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಮರುಪಾವತಿ, ಅಂಥ ಸಾಕಷ್ಟು ಯೋಜನೆಗಳನ್ನು ಆರಂಭಿಸಿದೆ. ಈ ಎಲ್ಲಾ ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಯೋಜನೆಗಳನ್ನು ತಲುಪದಿದ್ದಲ್ಲಿ ಈ ಸಂಘದಿಂದ ಒಗ್ಗಟ್ಟಾಗಿ ಸೌಲಭ್ಯಗಳನ್ನು ಪಡೆಯುವುದೇ ಸಂಘದ ಸಭೆಯ ಉದ್ದೇಶವಾಗಿದೆ. ಈ ಸಂಘದಲ್ಲಿ 8 ಜನ ಭಾಗವಹಿಸಿದ್ದರು. ವರದಿಗಾರರು:- ಯೋಹಾನ

## "ಜೀವನೋಪಾಯದ ಚಟುವಟಿಕೆಗಾಗಿ ಔದ್ಯೋಗಿಕ ತರಬೇತಿ"



10 ಡಿಸೆಂಬರ್ 2024ರಂದು ಜೀವನೋಪಾಯದ ಚಟುವಟಿಕೆಗಾಗಿ ಔದ್ಯೋಗಿಕ ತರಬೇತಿಯನ್ನು ಭಾಲ್ಕಿ ತಾಲೂಕಿನಲ್ಲಿ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಆರೋಗ್ಯ ರಕ್ಷಣೆ ವ್ಯಕ್ತಿಯಾಗಿದ್ದು, ವ್ಯಕ್ತಿಗಳ ಗುಂಪುಗಳು ಮತ್ತು ಸಮುದಾಯಗಳ ಅರ್ಥಪೂರ್ಣ ಉದ್ಯೋಗಗಳನ್ನು ಅಭಿವೃದ್ಧಿ ಪಡಿಸಲು ಅಥವಾ ಚೇತರಿಸಿಕೊಳ್ಳಲು ಪೌಲ್ಯ ಮಾಪನ, ಹಸ್ತಕ್ಷೇಪ, ಸಮಾಲೋಚನೆ ಮತ್ತು ತರಬೇತಿಯ ಬಳಕೆಯನ್ನು ಒಳಗೊಂಡಿದ್ದು, ಈ ಕ್ಷೇತ್ರವು ಮಾನಸಿಕ ಆರೋಗ್ಯ ಮತ್ತು ದೈಹಿಕ ಕಾರ್ಯಕ್ಷಮತೆಯನ್ನು ಬೆಂಬಲಿಸಲು ತರಬೇತಿ ಪಡೆದ ಮತ್ತು ಶಿಕ್ಷಣ ಪಡೆದ ಆರೋಗ್ಯ ರಕ್ಷಕರನ್ನು ಒಳಗೊಂಡಿದೆ. ಈ ಒಂದು ತರಬೇತಿಯಲ್ಲಿ ಜೀವನೋಪಾಯದ ಕೆಲಸ ಕಾರ್ಯಗಳ ಬಗ್ಗೆ ತರಬೇತಿ ಉದ್ದೇಶ ಹಾಗೂ ವಿವಿಧ ಔದ್ಯೋಗಿಕ ವಿಷಯಗಳನ್ನು ಹೇಳುತ್ತಾ, ಜೊತೆಗೆ ಕಾನೂನು ಸಲಹೆ ಮತ್ತು ವಕಾಲತ್ತು ಹೇಗೆ ನಡೆಯುತ್ತದೆ ಎಂಬುದನ್ನು ತಿಳಿಸಲಾಯಿತು. ವರದಿಗಾರರು:- ಅಶ್ವಿನಿ

## "ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ"



ದಿನಾಂಕ 20/12/2024 ರಂದು ಕಮಲ್ನಗರ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಯೋಹಾನ ಅವರು ಮಾನಸಿಕ ಕಾಯಿಲೆ ಕುರಿತು ಮಾತನಾಡಿದರು. ಮಾನಸಿಕ ವ್ಯಕ್ತಿಯ ಲಕ್ಷಣಗಳೇನೆಂದರೆ, ವಿಚಿತ್ರ ನಡುವಳಿಕೆ, ಅನಗತ್ಯವಾಗಿ ವಿಚಾರ, ಅನುಮಾನ ಪಡುವಂಥದ್ದು, ಅಳುವುದು, ವಿಚಿತ್ರವಾಗಿ ಮಾತನಾಡುವುದು ಇತ್ಯಾದಿ. ಈ ರೋಗಕ್ಕೆ ತುತ್ತಾದಂತ ವ್ಯಕ್ತಿಗಳಿಗೆ ಮಾತ್ರೆ ನೀಡುವ ಮೂಲಕ ಗುಣಪಡಿಸಬಹುದು. ಹಾಗೂ ಕ್ಯಾನ್ಸರ್ ಕಾಯಿಲೆಯು ಯಾರಿಗೆ ಬೇಕಾದರೂ ಬರಬಹುದು ಅದು ಗಂಟಲಿನ ಕ್ಯಾನ್ಸರ್, ಚರ್ಮಕ್ಯಾನ್ಸರ್, ಜಠರಕ್ಯಾನ್ಸರ್, ಮೂಳೆ ಕ್ಯಾನ್ಸರ್ ಇತ್ಯಾದಿ. ಶರೀರದ ಯಾವುದೇ ಭಾಗಕ್ಕೂ ಬರಬಹುದು. ಈ ರೋಗದ ಮುನ್ಸೂಚನೆಗಳು ಮೂರು ವಾರಗಳಿಗಿಂತ ಹೆಚ್ಚು ಕಾಲ ಇರುವ ಬಾಯಿ ಅಥವಾ ನಾಲಿಗೆ ಹುಣ್ಣು, ರಕ್ತವನ್ನು ಕೆಮ್ಮುವುದು, ಮೂತ್ರ ಮಾಡುವಾಗ ರಕ್ತ ಕಾಣಿಸಿಕೊಳ್ಳುವುದು, ಈ ತರ ಏನಾದರೂ ಲಕ್ಷಣ ಕಂಡು ಬಂದಲ್ಲಿ ವೈದ್ಯರ ಸಲಹೆಯನ್ನು ಪಡೆವುದು ಸೂಕ್ತ ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿಕಾರ್ಯಕ್ರಮದಲ್ಲಿ 25 ಜನರು ಭಾಗವಹಿಸಿ ಸದುಪಯೋಗವನ್ನು ಪಡೆದುಕೊಂಡರು. ವರದಿಗಾರರು:- ಯೋಹಾನ



ದಿನಾಂಕ 20/12/24 ರಂದು ಬಸವಕಲ್ಯಾಣ್ ತಾಲೂಕಿನ ಧಾಜೇಶ್ವರ್ ಗ್ರಾಮದ ಸರಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ನವಜೀವನ LLL ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಸುಜಾತಾ ರವರು ಜಾಗೃತಿಕ ಕಾರ್ಯಕ್ರಮವನ್ನು ಮಾಡಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಕಾರಣಗಳು, ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲಾಯಿತು. ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ ಇದು ಒಂದು ಮೆದುಳಿನ ಕಾಯಿಲೆ. ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು, ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಈ ಕಾಯಿಲೆಗೆ ಚಿಕಿತ್ಸೆ ಇದೆ. ಸತತವಾಗಿ ಚಿಕಿತ್ಸೆ ನೀಡುವುದರ ಮೂಲಕ ಕಾಯಿಲೆಯು ಗುಣಪಡಿಸಬಹುದು. ಮಾನಸಿಕ ಅಸ್ವಸ್ಥತೆ ಹೊಂದಿದ್ದ ವ್ಯಕ್ತಿಯನ್ನು ಕಂಡರೆ ನಿರ್ಲಕ್ಷಿಸದೇ ನಮ್ಮ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬೇಕು 9036664271 ಹೀಗೆ ಮಕ್ಕಳಿಗೆ ಕಾರ್ಯಕ್ರಮದ ಬಗ್ಗೆ ಅರಿವನ್ನು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಶಿಕ್ಷಕರು ಸೇರಿ ಒಟ್ಟು 89 ಜನರು ಭಾಗವಹಿಸಿದ್ದರು. ವರದಿಗಾರರು:- ಸುಜಾತಾ

## "ಉಚಿತ ಆರೋಗ್ಯ ಮತ್ತು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಕಾರ್ಯಕ್ರಮ"



16/12/2024 ರಂದು ಮದಕಟ್ಟಿ ಗ್ರಾಮದ ಸಬ್‌ಸೆಂಟರ್ ನಲ್ಲಿ ORBIT ಸಂಸ್ಥೆಯು ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಹಯೋಗದಲ್ಲಿ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ORBIT LLLF ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್. ಕ್ರಿಸ್ಟಿನಾ ಕಾರ್ಯಕರ್ತರಾದ ಅಮರ್, ಕುಮಾರ್ ಸ್ಪರ್ಶ ಕಾರ್ಯಕ್ರಮದ ಸಂಯೋಜಕರಾದ ಶ್ರೀ. ಯುಹಾನ್‌ರವರು ಇಂಡಿಯನ್ ಕ್ಯಾನ್ಸರ್ ಸೊಸೈಟಿ ಜಿಲ್ಲಾ ಸಂಯೋಜಕರಾದ ಶ್ರೀನಿಧಿ, ಡಾ. ಅಶ್ವಿನಿ ಡಾ. ಜ್ಯೋತಿ ಮತ್ತು ಸಿಬ್ಬಂದಿವರ್ಗದವರು, ಆನಂದ ಶೀಲದಾಳೆ ಸಮುದಾಯ ಆರೋಗ್ಯ ಅಧಿಕಾರಿ. ಆನಂದ ಮಹಾಜನ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರು. ಹಾಗೂ ಆಶಾ ಕಾರ್ಯಕರ್ತರು ಭಾಗವಹಿಸಿದರು. ಉದ್ಘಾಟನೆಯಲ್ಲಿ, ಡಾ. ಅಶ್ವಿನಿಯವರು ಸರ್ವರಿಗೂ ಕ್ಯಾನ್ಸರ್ ಕಾಯಿಲೆಯ ಅರಿವು ಮೂಡಿಸಿದರು ಹಾಗೂ ಶಿಬಿರದ ಉದ್ದೇಶವನ್ನು ಸಿಸ್ಟರ್ ಕ್ರಿಸ್ಟಿನಾ ರವರು ತಿಳಿಸಿದರು. ಈ ಶಿಬಿರದಲ್ಲಿ ಒಟ್ಟು 97 ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳಲಾಯಿತು. ಇದರ ಜೊತೆಗೆ ಜನರಲ್ಲಿ ಕ್ಯಾನ್ಸರ್ ಜಾಗೃತಿಯನ್ನು ಮೂಡಿಸುವುದರ ಮೂಲಕ ಶಿಬಿರವು ಶಾಂತಿಪೂರ್ಣವಾಗಿ ಮುಕ್ತಾಯಗೊಂಡಿತು.



# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ವಿಶ್ವ ವಿಕಲಚೇತನರ ದಿನಾಚರಣೆ"

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"



ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಆಶ್ರಯದಲ್ಲಿ 16/12/2024 ರಂದು ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಸಾಧನ ಸಲಕರಣೆಗಳ ವಿತರಣೆ ಮತ್ತು ಕ್ರಿಸ್‌ಮಸ್ ಆಚರಣೆ ಕಾರ್ಯಕ್ರಮ ಮದರ್ ಥೇರೆಸಾ ಸಭಾಂಗಣದಲ್ಲಿ ಆಯೋಜಿಸಿದ್ದು, ಆ ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನ ವಹಿಸಿದ ಪರಮ ಪೂಜ್ಯ ಬಿಷಪ್ ರಾಬರ್ಟ ಮೈಕಲ್ ಮಿರಂಡ ಧರ್ಮಾಧ್ಯಕ್ಷರು ಸೇವಾಸಂಗಮ ಸಂಸ್ಥೆ ಕಲಬುರಗಿ ಇವರು ಮಾತನಾಡುತ ಕಳೆದ ಆರು ವರ್ಷಗಳಿಂದ ಈ ಬೆಳವಣಿಗೆಯಲ್ಲಿ ಕುಂಠಿತ ಗೊಂಡ ಮಕ್ಕಳನ್ನು ಶಿಘ್ರ ಪತ್ತೆಹಚ್ಚುವ ಮೂಲಕ ಆರಂಭಿಕ ಶಿಕ್ಷಣವನ್ನು ಆರಂಭಿಸಿದರೆ ಆ ಮಕ್ಕಳು ಸಮಾಜದಲ್ಲಿ ಸಾಮಾನ್ಯ ಮಕ್ಕಳಂತೆ ಜೀವಿಸುವರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಆಗಮಿಸಿದ ಅಜೀಂ ಪ್ರೇಮಜಿ ಸಂಸ್ಥೆ ಕಲಬುರಗಿಯ ಜಿಲ್ಲಾ ಸಯೋಂಜಕರು ಮಾತನಾಡುತ ವಿಕಲ ಚೇತನರಿಗಿರುವ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ ವಾಸ್ ಮಾತನಾಡುತ ಕಳೆದ ಆರು ವರ್ಷಗಳಿಂದ ಈ ಕಾರ್ಯಕ್ರಮ ಉತ್ತಮ ರೀತಿಯಲ್ಲಿ ನಮ್ಮ ಕಾರ್ಯಕರ್ತರು ನಿಮ್ಮ ಮನೆಗೆ ಬಂದು ಮಕ್ಕಳಿಗೆ ಚಟುವಟಿಕೆ ಮಾಡಿಸುತ್ತಾರೆ. ಅವರಜೊತೆ ಕೈ ಜೋಡಿಸಿ ಪಾಲಕರು ಸಹ ಮಕ್ಕಳಿಗೆ ಚಟುವಟಿಕೆ ಮಾಡಿಸುವ ಮೂಲಕ ಮಕ್ಕಳಿಗೆ ಮುಖ್ಯ ವಾಹಿನಿಗೆ ಬರುವಂತೆ ಮಾಡಿದರೆ ಈ ನಮ್ಮ ಯೋಜನೆ ಯಶಸ್ವಿಗೊಂಡತೆ ಎಂದು ಹೇಳಿದರು. ಅದೇರೀತಿ ಈ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಮುಖ್ಯ ಗುರುಗಳು ಸೇಂಟ್ ಮೇರಿ ಚರ್ಚ ಕಲಬುರಗಿ ಫಾದರ್ ಪ್ರವೀಣ ಜೋಸೆಫ್, ಸೇವಾಸಂಗಮ ಸಂಸ್ಥೆಯ ಸಹನಿರ್ದೇಶಕರಾದ ಫಾದರ ದೀಪಕ್‌ಅವರು, ಶ್ರೀ ಬಸವರಾಜ ಚೆನ್ನವಾರ ಹಿರಿಯ ಪತ್ರಕರ್ತರು, ಕಲಬುರಗಿ ತಾಲೂಕಿನ ಎಮ್.ಆರ್.ಡಬ್ಲೂಆದ ಶ್ರೀ ಖಾಸಿಂ, ಆರ್.ಪಿ.ಡಿ ಟಾಸ್ಕ ಸದಸ್ಯರಾದ ಶ್ರೀಮತಿ ಗಾಯತ್ರಿ ಹಾಗೂ ಪಾಲಕರ ಗುಂಪಿನ ಅಧ್ಯಕ್ಷರಾದ ಶ್ರೀಮತಿ ಗೌಸಿಯಾ, ಕಲಬುರಗಿ ನಗರದ ವಿ.ಆರ್.ಡಬ್ಲೂ ಹಾಗೂ ಅಂಗನವಾಡಿ ಕಾರ್ಯಕರ್ತರು, ಮಕ್ಕಳು ಮತ್ತು ಪಾಲಕರು ಹಾಗೂ ಸೇವಾಸಂಗಮ ಸಂಸ್ಥೆಯ ಶಿಘ್ರ ಪತ್ತೆಹಚ್ಚುವಿಕೆ ಮತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಹಾಗೂ ಎಲ್ಲಾ ಕಾರ್ಯಕರ್ತರು ಒಟ್ಟು 100 ಜನ ಭಾಗವಹಿಸಿದ್ದರು.

## "ಟೆಂಟ್ ಜಾಗೃತಿ ಕಾರ್ಯಕ್ರಮ"



ಜಿಲ್ಲಾಡಳಿತ ಜಿಲ್ಲಾ ಪಂಚಾಯಿತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವ ವಿಕಲ ಚೇತನರ ದಿನಾಚರಣೆಯನ್ನು ಹಮ್ಮಿಕೋಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆ ಅಜೀಂ ಪ್ರೇಮಜೀ ಸಂಯೋಗದಲ್ಲಿ ಎಸ್.ಎಮ್ ಪಂಡಿತ ರಂಗಮಂದಿರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಟೆಂಟ್ ಅವೇರನೇಸ್ ಕಾರ್ಯಕ್ರಮ ಹಮ್ಮಿಕೋಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ದಕ್ಷಿಣ ಮತಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಅಲ್ಲಮಪ್ರಭು ಪಾಟೀಲ್ ಮತ್ತು ಜಿಲಾಧಿಕಾರಿಗಳಾದ ಫೌಜೀಯಾ ತರ್ನೂಮ ಅವರಿಗೆ ಸೇವಾಸಂಗಮ ಸಂಸ್ಥೆ ಕುರಿತು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಕರಪತ್ರ ನೀಡುವ ಮೂಲಕ ಕಾರ್ಯಕರ್ತರು ಮಾಹಿತಿ ನೀಡಿದ್ದರು. ಈ ಕಾರ್ಯಕ್ರಮಲ್ಲಿ ಒಟ್ಟು 300 ಜನ ಪಾಲ್ಗೊಂಡಿದರು.

## "ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ"



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ದಿನಾಂಕ 09.12.2024 ರಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಮಕ್ಕಳಿಗೆ ಗುಳಿಗೆಯನ್ನು ನುಂಗಿಸುವ ಮೂಲಕ ಜಂತುಹುಳು ನಿವಾರಣೆ ಮಾಹಿತಿಯನ್ನು ನೀಡಲಾಯಿತು. ಮಕ್ಕಳು ತಮ್ಮ ಪ್ರತಿದಿನದ ಕಾರ್ಯದಲ್ಲಿ ಪಾಲಿಸಬೇಕಾದ ನಿಯಮಗಳು ಕೈಗಳ ಉಗುರುಗಳನ್ನು ಚಿಕ್ಕದಾಗಿ ಕತ್ತರಿಸಿ ಸ್ವಚ್ಛವಾಗಿಡುವುದು. ಶೌಚದ ಬಳಿಕ ಕೈಗಳನ್ನು ಸಾಬೂನಿನಿಂದ ತೊಳೆಯುವುದು. ಶೌಚಾಲಯದಲ್ಲೇ ಶೌಚ ಮಾಡುವುದು. ಪಾದರಕ್ಷೆ ಧರಿಸಿ ಹೊರಗಡೆ ಓಡಾಡುವುದು. ಮುಚ್ಚಿಟ್ಟ ಆಹಾರವನ್ನು ಬಳಕೆ ಮಾಡುವುದು. ಹಣ್ಣು ಮತ್ತು ತರಕಾರಿಗಳನ್ನು ಶುದ್ಧ ನೀರಿನಿಂದ ತೊಳೆದು ಬಳಸುವುದು. ಮನೆಯ ಸುತ್ತಲು ನೈರ್ಮಲ್ಯವನ್ನು ಕಾಪಾಡುವುದು. ಈ ಎಲ್ಲಾ ನಿಯಮಗಳನ್ನು ಪಾಲಿಸುವುದರಿಂದ ನೀವು ಜಂತುಹುಳು ಬಾಧೆಯನ್ನು ತಡೆಗಟ್ಟಬಹುದು ಎಂದು ರಾಜಕುಮಾರಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಇಂದ್ರ ಶರ್ಮಾ ಅಂಗನವಾಡಿ ಕಾರ್ಯಕರ್ತೆ, ಶ್ರೀಮತಿ ಶೋಭಾ ಆಶಾ ಕಾರ್ಯಕರ್ತೆ, ಸಿಸ್ಟರ್ ವಿಜಯಲಕ್ಷ್ಮಿ ಹಾಗೂ 20 ಜನ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದಿರು.

## VRW ಮತ್ತು MRW ತರಬೇತಿ ಕಾರ್ಯಕ್ರಮ



ಡಿಸೆಂಬರ್ 19 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ ಅವರ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ದಡಿಯಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಸೆಂಟ್ ಮೇರಿ ಶಾಲೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಅದರಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ Physiotherapiest ಆದ ಶ್ರೀಯುತ ಸದಾನಂದಅವರು ಬೆಳವಣಿಗೆಯಲ್ಲಿ ಕುಂಠಿತವಿರುವ 0–6 ವರ್ಷದೊಳಗಿನ ಮಕ್ಕಳಿಗೆ ಹೇಗೆ ಪತ್ತೆ ಹಚ್ಚಬೇಕು



ಹಾಗೂ ಈ ರೀತಿ ಮಗು ಜನಿಸಲು ಇರುವ ಕಾರಣಗಳ ಕುರಿತು ಹಾಗೂ ಎಲ್ಲಾರೀತಿಯ ದೈಹಿಕ ನ್ಯೂನ್ಯತೆಗಳ ಬಗ್ಗೆ ಸಂಪೂರ್ಣ ಮಾಹಿತಿ ಕಲಬುರಗಿ ತಾಲೂಕದಲ್ಲಿರುವಂತಹ ವಿ.ಆರ್.ಡಬ್ಲ್ಯೂ 31 ಜನರು ಈ ತರಬೇತಿಯ ಸದುಪಯೋಗವನ್ನು ಪಡೆದುಕೊಂಡರು. ಕಲಬುರಗಿ ತಾಲೂಕುಗಳಲ್ಲಿ ಬರುವಂತಹ ಮಕ್ಕಳನ್ನು ಸೇವಾ ಸಂಗಮ ಸಂಸ್ಥೆಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ಸಹ ನಿರ್ದೇಶಕರಾ ಫಾದರ ದೀಪಕ, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನಾ ವ್ಯವಸ್ಥಾಪಕರಾದ ಶ್ರೀಮತಿ. ಶ್ವೇತಾ CBM Indian trust training superior ಶಂಭುಲಿಂಗ field superior ರಮೇಶ ಭಾಗವಹಿಸಿದರು.

## "ಬೆಳವಣಿಗೆ ಕುಂಠಿತ ವಿರುವ ಮಕ್ಕಳ ಬಗ್ಗೆ ಮಾಹಿತಿ ಕಾರ್ಯಕ್ರಮ"



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಮಹಾಲಕ್ಷ್ಮೀ ಲೇಔಟ್ ಅಂಗನವಾಡಿ ಕೇಂದ್ರ 1 ರಲ್ಲಿ ಡಿಸೆಂಬರ್ 28 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಡೇಶನ ಕಲಬುರಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತುಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿಯನ್ನು ಕು. ಅನಿತಾಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಅಂದರೆ ಹೇಗೆ ಇರುತ್ತಾರೆ. ಆ ಮಕ್ಕಳ ನ್ಯೂನ್ಯತೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆಯಿಂದ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೂರಕಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲಿ 11 ಜನ ಭಾಗವಹಿಸಿದರು. ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಚೆನ್ನಮ್ಮ ಉಪಸ್ಥಿತರಿದರು.

## "ಬೆಳವಣಿಗೆ ಕುಂಠಿತ ಮಕ್ಕಳ ಬೆಂಬಲ"



ಡಿಸೆಂಬರ್ 2024 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಜಂಟಿಯಾಗಿ ಕಲಬುರಗಿ ತಾಲ್ಲೂಕಿನ ಕಾಡನಾಳ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ_ಪತ್ತೆಹಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರುತ್ತಿಸಬೇಕು. ಗುರುತಿಸಿದ ಮಕ್ಕಳನ್ನು ಉತ್ತೇಜಕ ಚಟುವಟಿಕೆಗಳನ್ನು ಮಾಡುವುದರ ಮೂಲಕ ಅವರಲಿರುವ ನ್ಯೊನತೆಯ ತಿವ್ರತೆಯನು ಕಡಿಮೆ ಮಾಡಬಹುದು ಎಂದು ಲಕ್ಷ್ಮೀ ಹೇಳಿದರು 10ಜ ನ ಮಹಿಳೆಯರು ಭಾಗವಹಿಸಿದರು.

## "ಸರ್ಕಾರಿ ಸೌಲಭ್ಯಗಳಿಗೆ



ಮಗುವಿನ ಹೆಸರು ನಿರಂಜನ್ ತಂದೆ ಹೆಸರು ಶರಣಬಸಪ್ಪ ತಾಯಿ ಹೆಸರು ಶ್ರೀದೇವಿ ಗ್ರಾಮ ಶರಣಸಿರಸಗಿಯಲ್ಲಿ ಮಗು ನಿವಾಸಿಯಾಗಿರುತ್ತಾರೆ. ತಂದೆ ಕೂಲಿ ಕೆಲಸ ಮಾಡುತ್ತಿದ್ದು, ತಾಯಿಯು ಕೂಡ ಕೂಲಿ ಕೆಲಸಕ್ಕೆ ಮಾಡುತ್ತಾರೆ. ಮಗುವಿಗೆ ಮಾತನಾಡಲು ಬರುವುದಿಲ್ಲ ಮತ್ತು ನಡೆಯಲು ಬರುವುದಿಲ್ಲ. ಸೇವಾಸಂಗಮ ಸಂಸ್ಥೆಯಿಂದ ಲಕ್ಷ್ಮೀಅವರು ಬಂದು ಸರ್ಕಾರಿ ಸೌಲಬ್ಯಗಳ ಮಾಹಿತಿ ಹೇಳಿ ಮಗುವಿಗೆ ಯು.ಡಿ.ಐ.ಡಿ ಕಾರ್ಡ ಮಾಡಿಸಿಕೊಟ್ಟು ಫಲಾನುಭವಿಗಳು 800 ರೂಪಾಯಿ ಪಡೆಯುತ್ತಿದ್ದಾರೆ.

## "ಜಾಗೃತಿ ಕಾರ್ಯಕ್ರಮ



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಮಹಾದೇವ ಏರಿಯಾದಲ್ಲಿ ಡಿಸೆಂಬರ್ 17 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಡೇಶನ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮೀ ಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಅಂದರೆ ಹೇಗೆ ಇರುತ್ತಾರೆ. ಆ ಮಕ್ಕಳ ನ್ಯೂನ್ಯತೆಗೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಇರುವ ವಿವಿಧ ರೀತಿಯ ನ್ಯೂನ್ಯತೆಗಳ ಬಗ್ಗೆ 5% ಅನುದಾನ ಬಗ್ಗೆ ಮಾಹಿತಿ ತಿಳಿಸಲಾಯಿತು. ಈ ಕಾರ್ಯಕ್ರಮದಲಿ 14 ಜನ ಭಾಗವಹಿಸಿದರು.

## “ಬೆಳವಣಿಗೆ ಕುಂಠಿತ ಬಗ್ಗೆ ಜಾಗೃತಿ ಕಾರ್ಯಕ್ರಮ”



20/12/24 ರಂದು ಮಡಿಹಳ್ಳಿ ತಾಂಡಾದಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ ಇವರ ಸಂಯೋಗದಲ್ಲಿ ಬೆಳವಣಿಗೆ ಕುಂಠಿತ ವಿರುವ ಮಕ್ಕಳ ಬಗ್ಗೆ ಜಾಗೃತಿ ಕಾರ್ಯಕ್ರಮ ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿ ಅವರು 1 ರಿಂದ 7 ತರಗತಿಯ ವಿದ್ಯಾರ್ಥಿಗಳಿಗೆ ಬೆಳವಣಿಗೆ ಕುಂಠಿತವಿರುವ ಮಕ್ಕಳು ಹೇಗೆ ಇರುತ್ತಾರೆ ಎಂದು 0–6 ವರ್ಷದೊಳಗಿನ ಮಕ್ಕಳು 5 ತಿಂಗಳಿಗೆ ಕತ್ತು ನಿಲ್ಲಬೇಕು, 9 ತಿಂಗಳಿಗೆ ಮಗು ಕುಳಿತುಕೋಳ್ಳಬೇಕು, 1 ವರ್ಷಕ್ಕೆ ಮಗು ನಿಲ್ಲಬೇಕು 3 ವರ್ಷಕ್ಕೆ ಮಗು ಎಲ್ಲಾ ರೀತಿಯ ಪದಗಳು ಆಡಬೇಕು 6 ವರ್ಷಕ್ಕೆ ಮಗು ಸರಿಯಾದ ಸಮಯಕ್ಕೆ ಶಾಲೆಗೆ ಹೋಗಬೇಕು. ಈ ಹಂತಗಳು ಮಗುವಿನಲ್ಲಿ ಕಂಡು ಬರಬೇಕು ಒಂದು ವೇಳೆ ಈ ಯಾವ ಹಂತಗಳು ಕಂಡು ಬರದೆ ಇದ್ದಲ್ಲಿ ಮಕ್ಕಳಲ್ಲಿ ಏನಾದರೂ ನ್ಯೂನ್ಯತೆ ಇದೆ ಎಂದು ತಿಳಿದುಕೊಳ್ಳಬೇಕು, ಒಂದು ವೇಳೆ ಇಂತಹ ಮಕ್ಕಳ ಸಿಕ್ಕರೆ ನಮ್ಮ ಸಂಸ್ಥೆಗೆ ತಿಳಿಸಿ ಎಂದು ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಬ್ಬ ಸಹ ಶಿಕ್ಷಕಿ 30 ವಿದ್ಯಾರ್ಥಿಗಳು ಉಪಸ್ಥಿತರಿದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಬಗ್ಗೆ ಕುರಿತು ಅರಿವು ಕಾರ್ಯಕ್ರಮ”



ಡಿಸೆಂಬರ್ 21 2024ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀ ಅಜೀಮ್ ಪ್ರೇಮಜಿ ಪೌಡೇಶನ ಸಂಯುಕ್ತ ಆಶ್ರಯದಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ವಿದ್ಯಾನಗರದ ಅಂಗನವಾಡಿ ಕೇಂದ್ರದಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರುತಿಸಿದ ಮಕ್ಕಳನ್ನು ಹೇಗೆ ಚಟುವಟಿಕೆ ಮಾಡುವುದರ ಮೂಲಕ ಅವರಲ್ಲಿರುವ ನ್ಯೂನತೆ ಕಡಿಮೆಮಾಡಬಹುದು ಎಂಬುದರ ಬಗ್ಗೆ ಶಿವಕಾಂತ್ ಅವರು ಮಾಹಿತಿ ತಿಳಿಸಿದರು. ಅಂಗನವಾಡಿಯ ಹಿರಿಯ ಮೇಲ್ವಿಚಾರಕರಾದ ಪ್ರಭಾವತಿ ಮತ್ತು ಅಶೋಕ್ ನಗರ ವಲಯದ ಅಂಗನವಾಡಿ ಮೇಲ್ವಿಚಾರಕಿಯಾದ ಶಿವಲೀಲಾ ಹಾಗೂ ಅಂಗನವಾಡಿ ಕಾರ್ಯಕರ್ತರು ಮಕ್ಕಳ ಪಾಲಕರು 15 ಜನ ಭಾಗವಹಿಸಿದರು.

## “ಸರ್ಕಾರಿ ಆಸ್ಪತ್ರೆಯಲ್ಲಿ ಚೆಕ್‌ಅಪ್”



ಸೇವಾಸಂಗಮ ಸಂಸ್ಥೆಯ ವತಿಯಿಂದ ಶಿಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಸರ್ಕಾರಿ ಯೋಜನೆಗಳಾದ ಯು.ಡಿ.ಐ.ಡಿ ಕಾರ್ಡ ಸಲುವಾಗಿ 5 ಮಕ್ಕಳಿಗೆ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಚೆಕ್‌ಅಪ್ ಮಾಡಿಸಲಾಯಿತ್ತು, ಹಾಗೂ 2 ಮಕ್ಕಳಿಗೆ ಪಿಂಚಣಿ ಅರ್ಜಿ ಹಾಕಲಾಯಿತ್ತು.

## “ಕಲಿಕಾ ಕೇಂದ್ರದ ಮಕ್ಕಳಿಗೆ ಒಂದು ದಿನದ ಪ್ರವಾಸ”



ಡಿಸೆಂಬರ್ 26 2024ರಂದು ಸೇವಾಸಂಗಮ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಪಂಚಶೀಲ ನಗರದ ಸಂಜೆ ಕಲಿಕಾ ಕೇಂದ್ರದ ಮಕ್ಕಳಿಗೆ ಕಲಬುರ್ಗಿ ನಗರದ ಪಬ್ಲಿಕ್ ಗಾರ್ಡನಿಗೆ ಮಕ್ಕಳಿಗೆ ಒಂದು ದಿನದ ಪ್ರವಾಸ ಕರೆದುಕೊಂಡು ಹೋಗಲಾಯಿತು. ನೈಸರ್ಗಿಕ ವಾಗಿ ಸಿಗುವ ಗಾಳಿ, ಬಿಸಿಲು, ನೀರು ಇತ್ಯಾದಿ ನಮಗ ತುಂಬಾ ಪ್ರಮುಖ್ಯವಾಗಿದೆ. ನೈಸರ್ಗಿಕವಾಗಿ ಸಿಗುವ ಲವಂಗಳನ್ನು ಮನುಷ್ಯನಿತಿ ತುಂಬಾ ಉಪಯೋಗಕಾರಿಯಾಗಿದೆ. ಮನವನು ಆರೋಗ್ಯಯವಂತರಾಗಿ ಜೀವಿಸಲು ಸಹಾಯ ಮಾಡುತ್ತದೆ ಎಂದು ತೀಳಿಸಿದರು.

## “ಕಲಿಕಾ ಕೇಂದ್ರದ ಮಕ್ಕಳಿಗೆ ಕ್ರಿಸ್ಮಸ್ ಹಬ್ಬ ಆಚರಣೆ”

ಸೇವಾಸಂಗಮ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಕಲಬುರ್ಗಿ ಇಂದ್ರ ನಗರದ ಕಲಿಕಾ ಕೇಂದ್ರದ ಮಕ್ಕಳಿಗೆ ಶಿಕ್ಷಕಿಯಾದ ಮಾಲಾಶ್ರೀ ಅವರ ಮಕ್ಕಳಿಗೆ ವಿಜ್ಞಾನ ಹಾಗೂ ಗಣಿತದ ವಿಷಯಗಳ ಕುರಿತು 24 ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಸಂಜುನಗರ್ ಕಲಿಕಾ ಕೇಂದ್ರದ ಮತ್ತು ನೆಹರು ನಗರ್ ಮಕ್ಕಳಿಗೆ ಚಂದ್ರಕಾಂತ್ ರವರು ಕ್ರಿಸ್ಮಸ್ ಹಬ್ಬದ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಹಾಗೂ ಮಕ್ಕಳ ಜೊತೆಯನ್ನು ಕೇಕ್ ಕಟ್ ಮಾಡುವ ಮೂಲಕ ಕ್ರಿಸ್ಮಸ್ ಹಬ್ಬದ ಆಚರಣೆ ಮಾಡಲಾಯಿತು.





## “ಉಜ್ಜೀವನ ಕಾರ್ಯಕ್ರಮ”

### “ಕೈ ತೋಟವನ್ನು ನಿರ್ಮಾಣ ಮಾಡಿಕೋಳ್ಳಿ ಸಾವಯುವ ಗೋಬ್ಬರವನ್ನು ಬಳಕೆ ಮಾಡಿಕೋಳ್ಳಿ”





ದಿನಾಂಕ 10/12/2024 ರಂದು ಸೇವಾಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದಿಂದ ಎ.ಡಿ.ಎ ಅಧಿಕಾರಿಯಾದ ಕುಮಾರಿ ಸನ್ಮತಿರವರು ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತಿಯಾದ ಶ್ರೀ ಮತಿ ನಂದಿನಿರವರ ಜೋತೆ ಗೂಡಿ ಕಲಬುರಗಿ ತಾಲೂಕಿ ಧರ್ಮಾಪುರ ಗ್ರಾಮಕೆ ಭೇಡಿ ನೀಡಿ ಕೈತೋಟ ಮಾಡಲು ತರಕಾರಿ ಬೀಜಗಳನ್ನು ನೀಡಿರುವುತಂಹ ಸದ್ಯಸೆರ ಮನೆ ಭೀಟಿಮಾಡುವ ಮೂಲಕ ಕೈ ತೋಟವನ್ನು ವಿಕ್ಷಿಸಿ ಸಾವಯುವ ಗೋಬ್ಬರವನ್ನು ಬಳಕೆ ಮಾಡಿಕೋಳ್ಳಿ ಎಂದು ತಿಳಿಸಿ ಹಸಿರು ತರಕಾರಿಯನ್ನು ದಿನ ನೀತ್ಯ ಆಹಾರದಲ್ಲಿ ಬಳಸಿ ಕೋಳ್ಳಿ ಎಂದು ಸದ್ಯಸೆರಿಗೆ ತಿಳಿಸಲಾಯಿತ್ತು

### “ಉಜ್ಜೀವನ ಮೂರನೇ ಹಂತದ ಮೂರನೇ ವರ್ಷದ ವಾರ್ಷಿಕ ಸಭೆ”





ದಿನಾಂಕ 19.20.12.2024 ರಂದು ರಾಜ ಮಟ್ಟದ ಉಜ್ಜೀವನ ಮೂರನೇ ಹಂತದ ಮೂರನೇ ವರ್ಷದ ವಾರ್ಷಿಕ ಸಭೆಯನ್ನು ಹೈದರಾಬಾದ ಹಾಸನ ಸಂಸ್ಥೆಯಲ್ಲಿ ಆಯೋಜನೆ ಮಾಡಲಾಯಿತ್ತು. ಈ ಒಂದು ವಾರ್ಷಿಕ ಸಭೆಯಲ್ಲಿ ಹೈದರಾಬಾದ ಮತ್ತು ಕರ್ನಾಟಕ ರಾಜ್ಯದ 7 ಸಂಸ್ಥೆಯ ನಿರ್ದೇಶಕರು ಮತ್ತು ಸಂಯೋಜಕರು ಭಾಗವಹಿಸಿ ತಮ್ಮ ಮೂರನೆ ವರ್ಷದ ಕೋನೆಯ ಹಂತದ ವರದಿಯನ್ನು ಮಂಡನೆ ಮಾಡಲಾಯಿತ್ತು, ಕಾರಿತಾಸ ಇಂಡಿಯಾ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ ಅನಿಲ್ ಕ್ರಾಸ್ತ ಹಾಗೂ ಉಜ್ಜೀವನ ಕಾರ್ಯಕ್ರಮದ ವ್ಯವಸ್ಥಾಪಕರಾದ ಡಾಕ್ಟರ ಹರಿದಾಸ ಸರ್ ಹಾಗೂ ಕರ್ನಾಟಕ ರಾಜ್ಯಮಟ್ಟದ ಸಂಯೋಜಕರಾದ ರಾಬರ್ಟ ಡಿಸೋಜಾರವರು ಉಪಸ್ಥಿತರಿದ್ದರು.

### “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”



ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ಕ್ರೀಡೆ ಅಗತ್ಯ



ಮಹಿಳೆಯರು ಸಬಲರಾಗಬೇಕು: ಫಾದರ್ ವಿಕ್ಟರ್ ವಾಸ್



ಆರ್ಬಿಟ್ ಸಂಸ್ಥೆಯಲ್ಲಿ ಮಹಿಳೆಯರಿಗೆ ಸಂಪನ್ಮೂಲ ಕ್ರೂಢಿಕರಣ ತರಬೇತಿ

ಜರ್ನಲಿಸ್ಟ್ ವಾಯ್ಸ್ ದಿನಪತ್ರಿಕೆ
ವರದಿ. ಶ್ರೀಮಂತರಾವ ಇಂಚುರೆ



‘ಕ್ರೀಡೆಯಿಂದ ದೈಹಿಕ, ಬೌದ್ಧಿಕ, ಕ್ರಿಯಾಶೀಲತೆ ವೃದ್ಧಿ’

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೆಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

**Fr. Victor Anil Vas**
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in